RNU AIR DHARWAD

NOVEMBER 20, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- **ಇಂದು, 'ವಿಶ್ವ ನೈರ್ಮಲ್ಯ ಜನ ಜಾಗೃತಿ' ದಿನಾಚರಣೆ.**
- **ದಕ್ಷಿಣಕನ್ನಡ ಜಿಲ್ಲೆ, ಸುಳ್ಯ ತಾಲೂಕಿನ** ಕುಕ್ಕುಜಡ್ಕದಲ್ಲಿ, ಗ್ರಾಮಸ್ಥರಿಂದ ಮಾದರಿ ಸಾಂಘಿಕ ಸ್ವಚ್ಛತಾ ಜನಾಂದೋಲನ.
- **ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ,** ಪರಿಸರಸ್ನೇಹಿ, ನಾರಿನ ಸ್ಯಾನಿಟರಿ ಪ್ಯಾಡ್ ತಯಾರಿಕೆ, ಕಾರ್ಯಾಗಾರ.
- **ರಾಜ್ಯದ ವಿವಿಧೆಡೆ, ಮಹಿಳಾ ಉದ್ಯಮಶೀಲತೆ ದಿನಾಚರಣೆ,** ಯಶಸ್ವಿ ಸಂಪನ್ನ.

<><><>

ಈಗ ವಾರ್ತೆಗಳ ವಿವರ

<><><>

'ಸುರಕ್ಷಿತ ಶೌಚಾಲಯಗಳು; ಸಮಾನ ಭವಿಷ್ಯಗಳು' ಎಂಬ ಘೋಷವಾಕ್ಯದೊಂದಿಗೆ, ಇಂದು ವಿಶ್ವ ನೈರ್ಮಲ್ಯ ದಿನವನ್ನು, ಆಚರಿಸಲಾಗುತ್ತಿದೆ. ಸ್ವಚ್ಛ ಶೌಚಾಲಯ – ಆರೋಗ್ಯವಂತ ಬದುಕು – ಸಮಾನತೆಯ ಸಮಾಜ ಎಂಬ, ಆಶಯದೊಂದಿಗೆ, ವಿಶ್ವಸಂಸ್ಥೆ, 2013 ರಲ್ಲಿ, ಈ ದಿನಾಚರಣೆಗೆ, ಅಧಿಕೃತ ಮುದ್ರೆ ಒತ್ತಿತು. ಶೌಚಾಲಯದ ಸೌಲಭ್ಯ, ಸುರಕ್ಷಿತ ನೈರ್ಮಲ್ಯ ವ್ಯವಸ್ಥೆ ಮತ್ತು ಶುದ್ಧ ನೀರಿನ ಲಭ್ಯತೆ ಪ್ರತಿಯೊಬ್ಬ ಮನುಷ್ಯನ ಮೂಲಭೂತ ಅಗತ್ಯ ಹಾಗೂ ಘನತೆಯ ಬದುಕಿನ ಅವಿಭಾಜ್ಯ ಅಂಗ. ನೈರ್ಮಲ್ಯದ ಕೊರತೆಯು,

ಸಾಂಕ್ರಾಮಿಕ ರೋಗಗಳ ಹರಡುವಿಕೆ, ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ, ಮಹಿಳೆಯರ ಸುರಕ್ಷತೆ ಹಾಗೂ ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣ. ಶೌಚಾಲಯ ನಿರ್ಮಾಣದ ಜೊತೆಗೆ, ಸಮರ್ಪಕ ಬಳಕೆ, ನಿರ್ವಹಣೆ ಮತ್ತು ತ್ಯಾಜ್ಯ ನೀರಿನ ವೈಜ್ಞಾನಿಕ ಸಂಸ್ಕರಣೆಯೂ ಅಷ್ಟೇ ಮುಖ್ಯ.

<><><>

ಇಂದು ಕಸದ ಸಮಸ್ಯೆ, ಕೇವಲ ನಗರಗಳಿಗೆ ಮಾತ್ರ ಸೀಮಿತವಾಗಿಲ್ಲ. ನಮ್ಮ ಗ್ರಾಮೀಣ ಭಾಗಗಳಲ್ಲೂ, ಕಸ ವ್ಯಾಪಕವಾಗಿ ಕಂಡುಬರುತ್ತಿದೆ. ಕಸ ನಿರ್ವಹಣೆಗೆ ಸರ್ಕಾರದ ವತಿಯಿಂದ ಸೂಕ್ತ ವ್ಯವಸ್ಥೆ ಇದ್ದರೂ, ಎಲ್ಲೆಂದರಲ್ಲಿ ಕಸ ಎಸೆಯುವ ಪ್ರವೃತ್ತಿ, ಸ್ವಚ್ಛತಾ ಪಾಲನೆಗೆ ದೊಡ್ಡ ಸವಾಲಾಗಿದೆ. ಈ ಮಧ್ಯೆ ನಾಡಿನ ವಿವಿಧೆಡೆ, ಹಲವು ಸಂಘ–ಸಂಸ್ಥೆಗಳು, ಸ್ವಯಂಸ್ಫೂರ್ತಿಯಿಂದ ಸ್ವಚ್ಛತಾ ಅಭಿಯಾನ ನಡೆಸುತ್ತಿವೆ. ಅಂತಹ ಒಂದು ಪ್ರಯತ್ನ ಇದೀಗ, ದಕ್ಷಿಣಕನ್ನಡ ಜಿಲ್ಲೆ ಸುಳ್ಯ ತಾಲೂಕಿನ, ಕುಕ್ಕುಜಡ್ಕದಲ್ಲಿ ಪ್ರಗತಿಯಲ್ಲಿದೆ. ಕೃಷಿಕ ಶಿವರಾಂ ಪೈಲೂರು, ಕಳೆದ ತಿಂಗಳು ಏಕಾಂಗಿಯಾಗಿ ಆರಂಭಿಸಿದ್ದ, ಸ್ವಚ್ಛತಾ ನಡಿಗೆಗೆ, ಬರಬರುತ್ತ ಗ್ರಾಮದ ಇತರರೂ ಕೈಜೋಡಿಸ ತೊಡಗಿದ್ದು, ಇದೀಗ ಒಂದು ಅಭಿಯಾನವಾಗಿ ರೂಪುಗೊಳ್ಳುತ್ತಿದೆ. ಇತ್ತೀಚೆಗೆ ಸಂಪಾಜೆಯಿಂದ ಮಂಗಳೂರಿಗೆ ಸ್ವಚ್ಛತಾ ದಂಡಯಾತ್ರೆ ಕೈಗೊಂಡಿದ್ದ ನಾಗರಾಜ ಬಜಾಲ್ ಅವರೊಂದಿಗೆ ಹೆಜ್ಜೆಹಾಕಿದ್ದ ಪೈಲೂರು, ಇದೇ ಪ್ರೇರಣೆಯಿಂದ ತಾವೂ ಗ್ರಾಮದಲ್ಲಿ ರಸ್ತೆಬದಿಯ ಕಸ ಹೆಕ್ಕತೊಡಗಿದರು. ನಂತರದ ದಿನಗಳಲ್ಲಿ, ಕುಕ್ಕುಜಡ್ಕ ಗ್ರಾಮದ ಇತರ ಸನ್ಮನಸ್ಸಿಗರೂ ಜತೆಗೂಡಿ, ಈಗಾಗಲೆ ಒಂದು ಪ್ರಯಾಣಿಕರ ತಂಗುದಾಣ ಪರಿಸರವನ್ನು ಸ್ವಚ್ಛಗೊಳಿಸಿದ್ದಾರೆ. ಇದರ ಮುಂದುವರಿದ ಹಂತವಾಗಿ, ನಾಡಿದ್ದು ಭಾನುವಾರ, ಚಾಮಡ್ಕ ಜಲಪಾತ ಪರಿಸರದಲ್ಲಿ ಸ್ವಚ್ಛತಾ ಸಂಭ್ರಮ ಎಂಬ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಆ ಪರಿಸರದಲ್ಲಿ ಸ್ವಚ್ಛತಾ ಕಾರ್ಯದ ಜತೆಗೆ, ಶಾಲಾಮಕ್ಕಳಿಗೆ ಚಿತ್ರ ರಚನೆ ಸ್ಪರ್ಧೆ ಹಾಗೂ ಸ್ವಚ್ಛತಾ ಕಾರ್ಯಕರ್ತರಿಗೆ, ಗೌರವ ಸಮರ್ಪಣೆ ಕೂಡ ಏರ್ಪಾಡಾಗಿದೆ. ಈ ಹಿನ್ನೆಲೆಯಲ್ಲಿ, ಶಿವರಾಂ ಪೈಲೂರು, ಪ್ರದೇಶ ಸಮಾಚಾರದೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು.

<><><>

ಡಾಕ್ಟರ್ ಶಿವರಾಂ ಪೈಲೂರು ಧ್ವನಿ 75 ಸೆಕೆಂದುಗಳು

<><><>

ರಾಸಾಯನಿಕಯುಕ್ತ, ಪ್ಲಾಸ್ಟಿಕ್‌ನಿಂದ ತಯಾರಿಸಿದ, 'ಸ್ಯಾನಿಟರಿ ನ್ಯಾಪಕಿನ್' ಬಳಕೆ, ಕಾಲಕ್ರಮೇಣ, ಆರೋಗ್ಯಕ್ಕೆ ಹಾನಿ ಉಂಟು ಮಾಡಲಿದ್ದು, ನೈಸರ್ಗಿಕ ಪ್ಯಾಡ್‌ಗಳನ್ನು ಬಳಸುವಂತೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಸಹ ಸಂಶೋಧನಾ ನಿರ್ದೇಶಕ ಡಾಕ್ಟರ್ ಎಂ.ಎಸ್.ಶಿರಹಟ್ಟಿ, ಕೋರಿದ್ದಾರೆ. ಕೃಷಿ ವಿಸ್ತರಣೆ ಉಪ ಅಭಿಯಾನ – ಆತ್ಮ ಯೋಜನೆಯ, ಗಿರಿಜನ ಉಪಯೋಜನೆ ಅಡಿ. "ಪರಿಸರ ಸ್ನೇಹಿ, ನಾರುಗಳಿಂದ ರೂಪಿತ, ಮರುಬಳಕೆಯ ಸ್ಯಾನಿಟರಿ ಪ್ಯಾಡ್‌ಗಳ ತಯಾರಿಕೆ" ಕುರಿತ, ಮೂರು ದಿನಗಳ ತರಬೇತಿ ಕಾರ್ಯಾಗಾರಕ್ಕೆ, ಚಾಲನೆ ನೀಡಿ ಮಾತನಾಡಿದರು. ಅಖಿಲ ಭಾರತ, ಸಮನ್ವಯ ಸಂಶೋಧನಾ ಯೋಜನೆ – ಕೃಷಿ ನಿರತ ಮಹಿಳೆ, ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ, ಕೃಷೋನ್ನತಿ ಕಾರ್ಯಕ್ರಮದಡಿ,

ಮಹಿಳೆಯ ಆರೋಗ್ಯ ಕಾಪಾಡುವ ಮೂಲಕ, ಇಡೀ ಕುಟುಂಬದ ಆರೋಗ್ಯ ರಕ್ಷಣೆಗೆ, ಯೋಜಿಸಲಾಗಿದೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಮಹಿಳಾ ಉದ್ಯಮಶೀಲತಾ ದಿನಾಚರಣೆಯನ್ನು, ರಾಜ್ಯದ ವಿವಿಧೆಡೆ, ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ, ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಉದ್ಯಮ ಕ್ಷೇತ್ರದಲ್ಲಿ, ಮಹಿಳೆಯರ ಸಾಧನೆ ಗೌರವಿಸುವುದು, ತನ್ಮೂಲಕ ಅವರನ್ನು ಸಬಲೀಕರಿಸುವುದು, ಮಹಿಳಾ ಉದ್ಯಮಿಗಳ ಸವಾಲುಗಳ ಬಗ್ಗೆ, ಜನ ಜಾಗೃತಿ ಮೂಡಿಸುವುದು ಈ ದಿನಾಚರಣೆಯ, ಮುಖ್ಯ ಉದ್ದೇಶವಾಗಿದೆ. ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಿ, ದೇಶದ ಆರ್ಥಿಕ ಬೆಳವಣಿಗೆ ಉತ್ತೇಜಿಸುವುದು ಮತ್ತು ಬಡತನದ ನಿರ್ಮೂಲನೆಯ ಗುರಿ, ಈ ದಿನಾಚರಣೆ ಹೊಂದಿದೆ.

<><><>

ಧಾರವಾಡದ, *'ರಿಹ್ಯಾಬಿಲಿಟೇಟಿವ್ ಅಸಿಸ್ಟನ್ಸ್ ಫಾರ್ ಪೀಪಲ್ ಇನ್ ಡಿಸ್ಟ್ರೆಸ್– ರ್‍ಯಾಪಿಡ್'* ಸಂಸ್ಥೆ, ಕಳೆದ 25 ವರ್ಷಗಳಲ್ಲಿ, 500ಕ್ಕೂ ಹೆಚ್ಚು ಮಹಿಳೆಯರನ್ನು, ಆರ್ಥಿಕವಾಗಿ ಸ್ವಾವಲಂಬಿಯಾಗಿಸಿದ ಹಿರಿಮೆ ಹೊಂದಿದೆ. *ರ್‍ಯಾಪಿಡ್* ಕಾರ್ಯದರ್ಶಿ, ವಾಣಿ ವಿಲಾಸ ಪುರೋಹಿತ, ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದರು.

<><><>

ವಾಣಿ ವಿಲಾಸ ಪುರೋಹಿತ ಧ್ವನಿ 59 ಸೆಕೆಂದುಗಳು

<><><>

ದೇಶದಲ್ಲೇ ಮೊದಲ ಬಾರಿಗೆ, ನವೋದ್ಯಮಗಳ 'ಮೊದಲ ಗ್ರಾಹಕ'ನಾಗಿ, ಸರ್ಕಾರವೇ ವಸ್ತು, ಉತ್ಪನ್ನ ಮತ್ತು ಸೇವೆಗಳನ್ನು ಖರೀದಿಸಿ, ಪ್ರೋತ್ಸಾಹಿಸುವ ವಿನೂತನ ಯೋಜನೆಗೆ, ರಾಜ್ಯ ಸರ್ಕಾರ ಮುಂದಡಿ ಇಟ್ಟಿದೆ. ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಸಾಮಾಜಿಕ ಜಾಲತಾಣದಲ್ಲಿ

ಮಾಹಿತಿ ನೀಡಿ, ಬೆಂಗಳೂರು ತಂತ್ರಜ್ಞಾನ ಶೃಂಗಸಭೆ–2026 ರಲ್ಲಿ, 8 ನವೋದ್ಯಮಗಳಿಗೆ, 25 ಲಕ್ಷ ರೂಪಾಯಿ ಮೌಲ್ಯದ, ಕಾರ್ಯಾದೇಶಗಳನ್ನು ನೀಡಲಾಗಿದೆ. ಐ.ಟಿ. ಬಿ.ಟಿ. ಇಲಾಖೆಯ, Government First ಕಾರ್ಯಕ್ರಮದ ಮೂಲಕ, ಸರ್ಕಾರವೇ ನವೋದ್ಯಮಗಳ ಮೊದಲ ಗ್ರಾಹಕನಾಗುತ್ತಿದೆ ಎಂದು, ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

'ನಶೆ ಮುಕ್ತ ಭಾರತ ಹಾಗೂ ಕರ್ನಾಟಕ' ಅಭಿಯಾನದಡಿ, 'ಆಪರೇಷನ್ ರೈಸ್' ಹಾಗೂ 'ಬೇಡ ಬ್ರೋ' ರಾಜ್ಯಾದ್ಯಂತ, ಯುವಜನ ಜಾಗೃತಿ ಮಾಸಿಕ ಅಭಿಯಾನ ಜರುಗುತ್ತಿದ್ದು, 4ನೇ ಆವೃತ್ತಿಯ ತಂಬಾಕು ಮುಕ್ತ ಯುವ ಅಭಿಯಾನಕ್ಕೆ, ಮಂಡ್ಯ ಜಿಲ್ಲೆ, ಆರೋಗ್ಯಾಧಿಕಾರಿ ಡಾಕ್ಟರ್ ಜಿ.ಸಿ.ಬೆಟ್ಟಸ್ವಾಮಿ, ಚಾಲನೆ ನೀಡಿದರು. ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಪೊಲೀಸ್ ಸಹಾಯಕ ಉಪ ಆರಕ್ಷಕರಿಗೆ, ಕೊಟ್ಪಾ ಕಾಯ್ದೆಗಳ ಕುರಿತ, ಒಂದು ದಿನದ ತರಬೇತಿ ಕಾರ್ಯಾಗಾರ, ಆಯೋಜಿಸಿತ್ತು. ಪೊಲೀಸ್ ಉಪ ವರಿಷ್ಠಾಧಿಕಾರಿ, ಲಕ್ಷ್ಮೀನಾರಾಯಣ ಪ್ರಸಾದ, ಅತಿಥಿಯಾಗಿ ಪಾಲ್ಗೊಂಡು ಮಾತನಾಡಿ, ಶಿಕ್ಷಣ ಸಂಸ್ಥೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ಕೊಟ್ಪಾ ಕಾರ್ಯಾಚರಣೆ ನಡೆಸಲು ಹಾಗೂ ಗ್ರಾಮಗಳನ್ನು ತಂಬಾಕು ಮುಕ್ತಗೊಳಿಸಲು, ಯೋಜಿಸಲಾಗಿದೆ ಎಂದರು.

<><><>

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ, ಏಳು ನಿಗಮಗಳಡಿ, 2012–14ನೇ ಸಾಲಿನಿಂದ, 2020–21 ನೇ ಸಾಲಿನ ವರೆಗಿನ ಅವಧಿಯಲ್ಲಿ, ವಿವಿಧ ಯೋಜನೆಗಳಡಿ, ಫಲಾನುಭವಿಗಳು ಪಡೆದ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಲು, ರಾಜ್ಯ ಸರ್ಕಾರ ತೀರ್ಮಾನಿಸಿದೆ. ಸಚಿವ ಸಂಪುಟ ಸಭೆ ಬಳಿಕ, ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ಉಪ ಮುಖ್ಯಮಂತ್ರಿ ಡಾಕ್ಟರ್ ಜಿ.ಪರಮೇಶ್ವರ, ಏಳು ನಿಗಮಗಳಿಂದ 2 ಕೋಟಿ 83 ಲಕ್ಷ ಫಲಾನುಭವಿಗಳಿಗೆ, ಒಟ್ಟು 977 ಕೋಟಿ 81 ಲಕ್ಷ ರೂಪಾಯಿ ಸಾಲ ವಿತರಿಸಲಾಗಿತ್ತು. ಸಾಲದ ಮೇಲಿನ ಬಡ್ಡಿ, 236 ಕೋಟಿ 4 ಲಕ್ಷ ರೂಪಾಯಿ, ಒಂದಾವರ್ತಿ ತೀರುವಳಿಯಾಗಿದೆ. ಆರು ತಿಂಗಳಲ್ಲಿ ಅಸಲು ಪಾವತಿಸಬೇಕೆಂಬ, ಷರತ್ತು ವಿಧಿಸಲಾಗಿದೆ ಎಂದರು.

<><><>

ದೊರವಾಯನ ಅಥವಾ ಹೆಬ್ಬಾಕ – ಗ್ರೇಟ್ ಇಂಡಿಯನ್ ಬಸ್ಟರ್ಡ್ ಪಕ್ಷಿಗಳ ಸಂರಕ್ಷಣೆಗೆ, ಬಳ್ಳಾರಿಯಲ್ಲಿ 349 ಎಕರೆ ಭೂಸ್ವಾಧೀನ ಪ್ರಕ್ರಿಯೆ, ಪ್ರಗತಿಯ ವಿವರ ಸಲ್ಲಿಸುವಂತೆ, ರಾಜ್ಯ ಉಚ್ಚ ನ್ಯಾಯಾಲಯ ಪೀಠ, ಅರಣ್ಯಾಧಿಕಾರಿಗಳಿಗೆ ಸೂಚಿಸಿದೆ. ಹೆಬ್ಬಾಕಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಲು, ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ, ಬಳ್ಳಾರಿಯ ಪರಿಸರವಾದಿ, ಎಡ್ವರ್ಡ್ ಸಂತೋಷ ಮಾರ್ಟಿನ್ ಹಾಗೂ ಇತರರು ಸಲ್ಲಿಸಿದ್ದ, ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿ ಅನು ಸಿವರಾಮನ್ ಮತ್ತು ನ್ಯಾಯಮೂರ್ತಿ ಕೆ.ಎಸ್. ಭರತಕುಮಾರ ಅವರಿದ್ದ, ವಿಭಾಗೀಯ ಪೀಠ, ಈ ಸೂಚನೆ ನೀಡಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಇಂದು, 'ವಿಶ್ವ ನೈರ್ಮಲ್ಯ ಜನ ಜಾಗೃತಿ' ದಿನಾಚರಣೆ.**
- **ದಕ್ಷಿಣಕನ್ನಡ ಜಿಲ್ಲೆ, ಸುಳ್ಯ ತಾಲೂಕಿನ** ಕುಕ್ಕುಜಡ್ಕದಲ್ಲಿ, ಗ್ರಾಮಸ್ಥರಿಂದ ಮಾದರಿ ಸಾಂಘಿಕ ಸ್ವಚ್ಛತಾ ಜನಾಂದೋಲನ.
- **ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ,** ಪರಿಸರಸ್ನೇಹಿ, ನಾರಿನ ಸ್ಯಾನಿಟರಿ ಪ್ಯಾಡ್ ತಯಾರಿಕೆ, ಕಾರ್ಯಾಗಾರ.
- **ರಾಜ್ಯದ ವಿವಿಧೆಡೆ, ಮಹಿಳಾ ಉದ್ಯಮಶೀಲತೆ ದಿನಾಚರಣೆ,** ಯಶಸ್ವಿ ಸಂಪನ್ನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>